O.S. 61/2014
P.W 2

(ಸಾಕ್ಷಿಯನ್ನು ದಿನಾಂಕ 15.07.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಎ.ಆರ್.ಆರ್. ವಕೀಲರಿಂದಃ(ಒಂದನೇ ಪ್ರತಿವಾದಿಯ ಪರವಾಗಿ)**

ನನ್ನ ತವರು ಮನೆ ನಾಗಮಂಗಲ ಆಗಿರುತ್ತದೆ. ನಾನು ಹತ್ತನೇ ತರಗತಿಯ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಮನೆ ಮತ್ತು ನನ್ನ ಗಂಡನ ಮನೆಯ ನಡುವೆ ಈ ಹಿಂದೆ ಯಾವುದೇ ಸಂಬಂಧ ಇರಲಿಲ್ಲ. ಮದುವೆಯಾದ ನಂತರ ಸಂಬಂಧ ಉಂಟಾಗಿರುತ್ತದೆ. ನನ್ನ ವಿವಾಹವು 1972 ರಲ್ಲಿ ಮೃತ ವಾದಿಯ ಜೊತೆ ಆಗಿರುತ್ತದೆ. ಕಾಡೇಗೌಡರು ನನ್ನ ಗಂಡನ ಮನೆಯ ಮೂಲ ಪುರುಷರಾಗಿರುತ್ತಾರೆ. ಕಾಡೇಗೌಡರಿಗೆ ನಾಲ್ಕು ಜನ ಗಂಡು ಮಕ್ಕಳು, ಅವರೆಂದರೆ ತಿಮ್ಮೆಗೌಡ, ಮಾಯಣ್ಣ, ಕೆಂಪಯ್ಯ, ತಿಮ್ಮಯ್ಯ. ಮಾಯಣ್ಣರವರನ್ನು ಮಾಯಣ್ಣಗೌಡ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ತಿಮ್ಮೆಗೌಡರನ್ನು ತಿಮ್ಮಯ್ಯ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. ನಾಲ್ಕನೇ ಮಗ ತಿಮ್ಮಯ್ಯ ನವರು ಮೂಲತಹ ತಿಮ್ಮಪ್ಪ ಆಗಿರುತ್ತಾರೆ ಎಂದರೆ ಸರಿಯಲ್ಲ. ಕಾಡೆಗೌಡರ ಮಕ್ಕಳು ಜೀವಿತಾವಧಿಯಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಭಾಗ ಮಾಡಿಕೊಂಡಿಲ್ಲ. ಕಾಡೆಗೌಡರಿಗೆ ಅಂದಾಜು ಸುಮಾರು 22 ಎಕರೆ ಆಸ್ತಿ ಇತ್ತು. ತಿಮ್ಮೆಗೌಡರ ಹೆಂಡತಿಯ ಹೆಸರು ಚಿಕ್ಕಮ್ಮ ಅವರ ಮಗಳ ಹೆಸರು ಚಿಕ್ಕಮಾಯಮ್ಮ ಎಂದರೆ ಸರಿ. ಚಿಕ್ಕಮಾಯಮ್ಮನವರನ್ನು ಬೆಂಗಳೂರಿಗೆ ಕೊಟ್ಟು ವಿವಾಹ ಮಾಡಿದ್ದು, ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ ಇರುತ್ತಾನೆ. ಇವರ ಹೆಸರುಗಳು ಶಾಂತ, ಸೀತಾ ಮತ್ತು ರಾಜು ಆಗಿರುತ್ತದೆ. ಮಾಯಣ್ಣಗೌಡರ ಹೆಂಡತಿಯ ಹೆಸರು ತಿಮ್ಮಮ್ಮ ಎಂದರೆ ಸರಿ. ಇವರಿಗೆ ಮೋಟಮ್ಮ ಮತ್ತು ತಿರುಮಲ್ಲಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದು ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಮೋಟಮ್ಮ ನವರನ್ನು ಎಲ್ಲಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂಬುದು ಗೊತ್ತಿಲ್ಲ ಆದರೆ ಅವರಿಗೆ ಇಬ್ಬರು ಮಕ್ಕಳಿರುತ್ತಾರೆ. ಅದೇ ರೀತಿಯಾಗಿ ತಿರುಮಲ್ಲಮ್ಮ ರವರಿಗೆ ಒಬ್ಬ ಮಗ ಇರುವುದು ಗೊತ್ತು ಒಟ್ಟು ಎಷ್ಟು ಮಕ್ಕಳು ಎಂಬುದು ಗೊತ್ತಿರುವುದಿಲ್ಲ.

ನನ್ನ ಮಾವನಾದ ಕೆಂಪಯ್ಯನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿಯ ಹೆಸರು ಕೆಂಪುಹೂವಮ್ಮ, ಎರಡನೇ ಹೆಂಡತಿಯ ಹೆಸರು ಹೊನ್ನಮ್ಮ ಎಂದರೆ ಸರಿ. ಕೆಂಪುಹೂವಮ್ಮ ಯಾವಾಗ ಮರಣ ಹೊಂದಿದರು ಎಂಬುದು ಗೊತ್ತಿಲ್ಲ. ಕೆಂಪುಹೂವಮ್ಮನಿಗೆ ಮಕ್ಕಳಿರಲಿಲ್ಲ. ಎರಡನೇ ಹೆಂಡತಿ ಹೊನ್ನಮ್ಮನಿಗೆ ಐದು ಜನ ಗಂಡು ಮಕ್ಕಳು ಹಾಗು ಒಬ್ಬಳು

ಹೆಣ್ಣುಮಗಳಿರುತ್ತಾರೆ. ಅವರೆಂದರೆ ಮಾಯಮ್ಮ, ತಿಮ್ಮೇಶ್ ಪ್ರಭು, ಮಾಯರಾಜು, ಪ್ರಸನ್ನಕುಮಾರ್, ಕೆಂಪು ಕುಮಾರ, ಎಂ.ಕೆ. ರಾಮಕೃಷ್ಣ. ಇವರಲ್ಲಿ ಮಾಯಮ್ಮ ಮರಣ ಹೊಂದಿದ್ದು ಅವರ ಗಂಡನ ಹೆಸರು ಗಿರಿಯಪ್ಪ ಎಂದರೆ ಸರಿ. ಇವರಿಗೆ ಒಂಬತ್ತು ಜನ ಮಕ್ಕಳು ಎಂದರೆ ಸರಿ. ಅವರೆಂದರೆ ಪುಟ್ಟಲಕ್ಷ್ಮೀ, ವೆಂಕಟರಾಮು, ಗೋವಿಂದರಾಜು, ಗಿರೀಶ್, ನಾಗರತ್ನ, ಪದ್ಮಾವತಿ, ಸುಭದ್ರ, ಕೃಷ್ಣ, ರಾಜೇಶ್ವರಿ ಆಗಿರುತ್ತದೆ.

ಮಾಯರಾಜು ರವರು ಮರಣ ಹೊಂದಿದ್ದು ಅವರ ಹೆಂಡತಿಯ ಹೆಸರು ಅನುರಾಧ ಆಗಿದ್ದು ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರೆಂದರೆ ಸೌಮ್ಯ, ಶೃತಿ, ಶ್ರೇಯು ಆಗಿರುತ್ತದೆ.

ಪ್ರಸನ್ನ ಕುಮಾರ್ ಮರಣ ಹೊಂದಿದ್ದು, ಅವರ ಹೆಂಡತಿಯ ಹೆಸರು ಹೇಮಾವತಿ ಆಗಿದ್ದು ಅವರಿಗೆ ಒಬ್ಬನೇ ಮಗ ಇದ್ದು ಅವರ ಹೆಸರು ಗೋಪಿನಾಥ ಆಗಿರುತ್ತದೆ.

ನನ್ನ ಗಂಡ ಮರಣ ಹೊಂದಿದ್ದು, ಅವರಿಗೆ ನಾನು ಹೆಂಡತಿಯಾಗಿದ್ದು, ನಮಗೆ ಒಟ್ಟು ಇಬ್ಬರು ಗಂಡು ಮಕ್ಕಳಿರುತ್ತಾರೆ. ಅವರೆಂದರೆ, ಎಂ.ಕೆ. ಸುಧೀರ್ ಕುಮಾರ್, ಎಂ.ಕೆ. ಕಿರಣ್ ಕುಮಾರ್ ಆಗಿರುತ್ತಾರೆ.

ರಾಮಕೃಷ್ಣ ರವರಿಗೆ ಇಬ್ಬರು ಗಂಡು ಮಕ್ಕಳು. ಅವರೆಂದರೆ ಚೇತನ್, ಪ್ರದೀಪ್ ಆಗಿರುತ್ತದೆ.

ಕಾಡೇಗೌಡರ ಕೊನೆಯ ಮಗ ತಿಮ್ಮಪ್ಪ ರವರಿಗೆ ಹನುಮಮ್ಮ ಎಂಬ ಹೆಂಡತಿ ಇದ್ದು ಇಬ್ಬರೂ ಮರಣ ಹೊಂದಿದ್ದಾರೆ ಎಂದರೆ ಸರಿ. ಇವರಿಗೆ ಮುೂರು ಜನ ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರುಗಳ ಹೆಸರುಗಳು ಗೊತ್ತಿರುವುದಿಲ್ಲ. ಗಂಡು ಮಕ್ಕಳ ಹೆಸರು ಮಾಯಣ್ಣ ಮತ್ತು ತಿಮ್ಮಣ್ಣ ಆಗಿರುತ್ತದೆ. ತಿಮ್ಮಪ್ಪನವರ ಹೆಣ್ಣುಮಕ್ಕಳಿಗೆ ಮದುವೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಕಾಡಮ್ಮ ಎಂಬುವವರು ತಿಮ್ಮಪ್ಪನ ಮಗಳಾಗಿದ್ದು, ಅವರು ಮರಣ ಹೊಂ ದಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ಹೊಂಬಾಳಮ್ಮ ಮತ್ತೊಬ್ಬ ಮಗಳಾಗಿದ್ದು, ಅವರು ಸಹ ಮರಣ ಹೊಂದಿರುತ್ತಾರೆ ಎಂದರೆ ಸರಿ. ಕಾಡಮ್ಮ ಮತ್ತು ಹೊಂಬಾಳಮ್ಮನವರಿಗೆ ಮಕ್ಕಳಿರುತ್ತಾರೆ ಎಂದರೆ ಸರಿ. ತಿಮ್ಮಪ್ಪನವರ ಮಗನಾದ ಮಾಯಣ್ಣನವರಿಗೆ ಒಟ್ಟು ಏಳು ಜನ

ಮಕ್ಕಳು. ಅವರೆಂದರೆ, ಎಂ. ತಿಮ್ಮಯ್ಯ, ಎನ್.ಎಂ ಮಾಯಣ್ಣ, ಮಾಯಮ್ಮ, ಎಂ. ಕಾಡೆಗೌಡ, ಜಯಮ್ಮ, ಎಂ. ಶ್ರೀನಿವಾಸ್ ಹಾಗೂ ಗೌರಮ್ಮ ಆಗಿರುತ್ತದೆ. ತಿಮ್ಮಪ್ಪನ ಎರಡನೇ ಮಗನಾದ ತಿಮ್ಮಣ್ಣನವರಿಗೆ ದೊಡ್ಡಮ್ಮ ಎಂಬ ಹೆಂಡತಿ ಇದ್ದು ಇವರಿಬ್ಬರೂ ಮರಣ ಹೊಂದಿರುತ್ತಾರೆ ಎಂದರೆ ಸರಿ. ಇವರಿಗೆ ನಾಗರಾಜು ಮತ್ತು ವಿಜಯ ಕುಮಾರ್ ಎಂಬ ಮಕ್ಕಳಿರುತ್ತಾರೆ.

ನಾನು ಈ ಮೇಲೆ ತಿಳಿಸಿದ ಎಲ್ಲಾ ವ್ಯಕ್ತಿಗಳನ್ನು ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಿರಿಕರ ಸ್ವತ್ತಾಗಿಲ್ಲದ ಕಾರಣ ಸೇರಿಸಿಲ್ಲ ಎನ್ನುತ್ತಾರೆ. ನನ್ನ ಮಾವ ಕೆಂಪಯ್ಯನವರು ಬೆಂಗಳೂರಿನಲ್ಲಿ ವಾಸವಾಗಿ, ಸೆಂಟ್ರಲ್ ಕಾಲೇಜಿನಲ್ಲಿ ಲ್ಯಾಬ್ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ದಾವಾ ಆಸ್ತಿಯು ನನ್ನ ಮಾವನವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸರಿ. ನನ್ನ ಮಾವನವರ ಸಹಿಯನ್ನು ನೋಡಿರದ ಕಾರಣ ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ಓದಿ ಹೇಳಿ ಅದರಲ್ಲಿರುವ ಸಹಿ ತಮ್ಮ ಮಾವನವರದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಮಾವನವರ ಬರವಣಿಗೆಯನ್ನು ನಾನು ನೋಡಿರುತ್ತೇನೆ. ನಾನು ನಮ್ಮ ಮಾವನವರಿಗೆ ಮಂಜೂರಾದ ಗ್ರ್ಯಾಂಟ್ ಸರ್ಟಿಫಕೇಟ್ ಅನ್ನು ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.